

# ಹಣ್ಣುಗಳ ಲೋಕದ ಹಿರಿಯಣ್ಣ

**ಕೃಷಿಯನ್ನು ಅಪ್ಪಿಕೊಂಡು, ಪರಿಸರವನ್ನು ಪ್ರೀತಿಸುತ್ತಾ, ಸಾಮಾಜಿಕ ಕೆಲಸಗಳಲ್ಲೂ ತೊಡಗಿಸಿಕೊಂಡಿದ್ದ ಡಾ. ಸೋನ್ಸ್ (ನಿಧನ: ಏಪ್ರಿಲ್ 5) ಕರ್ನಾಟಕದ ತೋಟಗಾರಿಕೆ ಕ್ಷೇತ್ರದ ಅಮೃತಫಲ. ತೋಟಗಾರಿಕೆ, ವಿಶೇಷವಾಗಿ ಹಣ್ಣುಗಳ ಕೃಷಿಗೆ ತಾರಾ ವರ್ಚಸ್ಸು ತಂದುಕೊಟ್ಟ ಹಿರಿಮೆ ಅವರದು.**

**ನರೇಂದ್ರ ರೈ ದೇರ್ಲ**
ಚಿತ್ರಗಳು: ಶ್ರೀಪಡ್ರೆ

ಮೂಡಬಿದ್ರೆಯ ಡಾ. ಎಲ್. ಸಿ. ಸೋನ್ಸ್ ಕರ್ನಾಟಕದ ಕೃಷಿಚರಿತ್ರೆಯಲ್ಲಿ ಮುಖ್ಯವಾಗುವುದು ಹತ್ತಾರು ವಿದೇಶಿ ಹಣ್ಣುಗಳನ್ನು ಈ ಮಣ್ಣಿಗೆ ಪರಿಚಯಿಸಿದ್ದಕ್ಕೆ. ಆ ಕಾಲದಲ್ಲೇ ಅಮೆರಿಕದ ವಿಶ್ವವಿದ್ಯಾನಿಲಯವೊಂದರಲ್ಲಿ ಸಸ್ಯಶಾಸ್ತ್ರದಲ್ಲಿ ಉನ್ನತ ಸಂಶೋಧನೆ–ಡಾಕ್ಟರೇಟ್ ಮಾಡಿ ಯಾವುದೇ ವೇತನ, ಸ್ಥಾನಾಧಾರಿತ ಹುದ್ದೆಯಲ್ಲಿ ಉಳಿಯದೇ ನೇರವಾಗಿ ಮಾತ್ರ ಮಣ್ಣಿಗೆ ಇಳಿದು ಕೃಷಿ ಮಾಡಿದುದಕ್ಕೆ. ಇನ್ನೂ ಅನೇಕರಿಗೆ ಗೊತ್ತಿಲ್ಲದ ಮೆಡಿಸಿನ್ ವೀಲ್, ಪಿರಮಿಡ್ಡು, ಲ್ಯಾಬರಿಂತ್, ಕ್ಯಾನ್ಸರಿಗೆ ಔಷಧಿ, ಜಲಶೋಧನೆ ಮುಂತಾದ ಕ್ಷೇತ್ರದಲ್ಲಿ ಅವರ ಆಸಕ್ತಿ ಮತ್ತು ಫಲಿತಗಳು, ತೋಟದಲ್ಲಿ ಪಾರಂಪರಿಕ ಕೃಷಿ ಪರಿಕರಗಳ ಮ್ಯೂಸಿಯಂ, ತನ್ನ ವಿಶಾಲ ವೈವಿಧ್ಯಮಯ ಗಿಡಗಳ ತೋಟವನ್ನು ಕೃಷಿ ಪ್ರವಾಸೋದ್ಯಮಕ್ಕೆ ಅಣಿಗೊಳಿಸಿದ್ದು... ಹೀಗೆ ಅನೇಕ ಕಾರಣಕ್ಕೆ ಸೋನ್ಸ್ ಕರ್ನಾಟಕದ ಕೃಷಿಕರ ಪಾಲಿಗೆ ಚರಿತ್ರಾರ್ಹ ಮಾದರಿಯೇ ಆಗಿದ್ದಾರೆ.

ಸೋನ್ಸ್ ಅವರು ಪ್ರಪಂಚದ ಕೃಷಿಯನ್ನು ನೋಡಿದವರು. ಅದೇ ಉದ್ದೇಶದಿಂದ ಅನೇಕ ದೇಶಗಳನ್ನು ಸುತ್ತಿದವರು. ಕೋಶ ಓದಿದವರು. ಬೀಜ, ಹವಾಮಾನ, ಪೋಷಣೆ, ಮಾರುಕಟ್ಟೆ ಇತ್ಯಾದಿಗಳನ್ನು ಅಧ್ಯಯನ ಮಾಡಿದವರು. ನಾಲ್ಕೈದು ದಶಕಗಳ ಹಿಂದೆಯೇ ತಮಗೆ ಬೇಕಾದ ರಂಬುಟಾನ್, ಮ್ಯಾಂಗೋಸ್ಟೀನ್, ಡುರಿಯನ್ ಗಿಡಗಳನ್ನು ವಿದೇಶಗಳಿಂದ ವಿಮಾನದಲ್ಲಿ ತರಿಸಿದವರು. ಅಂಥ ಗಿಡಮೂಲಗಳಿಂದಲೇ ಕಸಿ ಕಟ್ಟುವಿಕೆ, ನರ್ಸರಿ ಮೂಲಕ ಗಿಡ ವೃದ್ಧಿಸಿ ಹಂಚಿದವರು. ರಂಬುಟಾನ್, ಮ್ಯಾಂಗೋಸ್ಟೀನ್, ಅನಾನಸು, ತೆಂಗು, ಬಿದಿರು ಕೃಷಿಗೆ ಸೋನ್ಸ್ ಈ ಕ್ಷಣದವರೆಗೂ ಐಕಾನ್.

ಕರಾವಳಿ, ಮಲೆನಾಡಿನಲ್ಲಿಂದು ನೂರಾರು ನರ್ಸರಿಗಳಿವೆ. ಜೀವಮಾನದಲ್ಲಿ ಒಂದೇ ಒಂದು ಬೀಜ ಹಾಕದವರು, ಗಿಡ ನೆಡದವರು, ಅಂಗೈಯಗಲ ಸ್ವಂತ ಭೂಮಿ ಇಲ್ಲದವರು ಗಿಡ ಮಾರಿ ದುಡ್ಡು ಮಾಡುವುದೂ ಇದೆ. ನಂಬಿಕೆಯಾಚೆ ಆರ್ಥಿಕ ಲಾಭಕ್ಕಾಗಿ ಮೋಸ ಮಾಡುವವರೂ ಇದ್ದಾರೆ. ಇಂಥ ವಂಚನೆಯ ಜಾಲದಲ್ಲಿ ಮಣ್ಣಿಗೆ, ಪ್ರಕೃತಿಗೆ ಮೋಸ ಮಾಡಬಾರದೆಂದು ನ್ಯಾಯದ ದಾರಿಯಲ್ಲಿ ಗಿಡ ಹಂಚಿಕೆ ಮಾಡುವವರೂ ಅನೇಕರಿದ್ದಾರೆ. ಈ ಪೈಕಿ ಸೋನ್ಸ್ ಹೆಸರು ಇವತ್ತಿಗೂ ಈ ಭಾಗದಲ್ಲಿ ಬದ್ಧತೆಯನ್ನು ಉಳಿಸಿಕೊಂಡಿರುವುದಕ್ಕೆ ಕಾರಣ, ಅವರು ನಂಬಿಕೆ ಮತ್ತು ಗಿಡವನ್ನು ಜೊತೆ ಜೊತೆಗೆ ಹಂಚಿದ್ದು.

ತನ್ನದೇ ತೋಟದ ಉತ್ಪನ್ನಗಳನ್ನು, ಫಲಗಳನ್ನು ಮೌಲ್ಯವರ್ಧಿಸಿ, ತನ್ನದೇ ತೋಟದೊಳಗೆ ಬರುವ ಪ್ರವಾಸಿಗರಿಗೆ, ಕೃಷಿಕರಿಗೆ ಹೇಗೆ ಮಾರಬಹುದು ಎಂಬುವುದಕ್ಕೆ ಸೋನ್ಸ್ ಇಡೀ ದೇಶದ ಕೃಷಿಕರಿಗೆ ಮಾದರಿ. ವಾರ್ಷಿಕ ಐವತ್ತು ಟನ್ನಿನಷ್ಟು ಅನಾನಸು, ಭಾರೀ ಪ್ರಮಾಣದ ರಂಬುಟಾನ್, ಮ್ಯಾಂಗೋಸ್ಟೀನ್, ಹಲಸು ವಗೈರೆಗಳು ನೇರವಾಗಿ ಇವರ ತೋಟದಿಂದಲೇ ಬಿಕರಿಯಾಗುತ್ತವೆ. ಮತ್ತೆ ಮತ್ತೆ ಅದೇ ಗಿರಾಕಿಗಳು ಬಂದು ಸಕ್ಕರೆ ಸೇರಿಸದ ತಾಜಾ ಅನಾನಸು ಜ್ಯೂಸನ್ನು ಕುಡಿಯುತ್ತಾರೆ, ಒಯ್ಯುತ್ತಾರೆ ಎಂದರೆ ನೀವೇ ಯೋಚಿಸಿ. ‘ರೆಡಿ ಟು ಕುಕ್’ ಆಗಿಯೋ, ‘ರೆಡಿ ಟು ಡ್ರಿಂಕ್’ ಆಗಿಯೂ ನೀಡುವ ಸಾಧ್ಯತೆ ಇದ್ದಾಗ ಮತ್ತು ಅದರಲ್ಲಿ ಒಂದು ಸಹಜ ಸ್ವಾದ ರುಚಿ ಎಲ್ಲದಕ್ಕಿಂತ ಹೆಚ್ಚು ನಂಬಿಕೆ ಉಳಿಸಿಕೊಂಡಾಗ ಕೃಷಿಕನಿಗೆ ಅದರಿಂದಾಗುವ ಲಾಭ ಅವಕಾಶ ವಿಸ್ತರಣೆಗೆ ಸೋನ್ಸ್ ಅವರೇ ಒಂದು ಮಾದರಿ.

ಸೋನ್ಸ್ ಅವರು ಗಿಡ, ಕೃಷಿ, ಮಣ್ಣು, ನೀರು ಎಲ್ಲದರಲ್ಲೂ ದ್ವಿಮುಖಿ ಅನುಭವಿ. ಅವರದು ಬರೀ ವಿಶ್ವವಿದ್ಯಾನಿಲಯ ಕೇಂದ್ರಿತ ಕೃಷಿ ಪದವಿಯಲ್ಲ; ನಾಟಿ ಮತ್ತು ವಿಜ್ಞಾನ ಎರಡು ದಾರಿಯಲ್ಲೂ ತಜ್ಞತೆಯನ್ನು ಪಡೆದವರು, ಪಳಗಿದವರು. ಅನುಷ್ಠಾನಕ್ಕೆ ತಂದು ಗೆದ್ದವರು. ತನಗೆ ಅದೇ ಬೇಕು ಎಂದು ಉದ್ದೇಶಪೂರ್ವಕವಾಗಿ ಸಸ್ಯಶಾಸ್ತ್ರವನ್ನು ಓದಿ ಅಮೆರಿಕದ ಸುಪ್ರಸಿದ್ಧ ಮಂಟೇನೂ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದರೂ ಆ ಅಧ್ಯಯನಶೋಧನೆಯ ಪ್ರತಿ ತರಗತಿಯಲ್ಲಿ ಕೂತಾಗಲೂ ಮುಂದೆ ತಾನು ಮಣ್ಣಿಗೆ ವಾಪಾಸು ಹೋಗಲೇಬೇಕೆಂಬ ಹಪಹಪಿ, ನೆಲಮುಖಿ ಆಸೆ, ಅಲ್ಲಿ ಗೆಲ್ಲುವ ಹೊಸತನ್ನು ಪ್ರಯೋಗಿಸುವ ಹುರುಪು ಇತ್ತು. ವಿಶ್ವವಿದ್ಯಾನಿಲಯದ ಉನ್ನತ ಸಂಶೋಧನೆ ಭವಿಷ್ಯದ ತನ್ನೆಲ್ಲ ಯೋಚನೆ–ಯೋಜನೆಗಳಿಗೆ ಪೂರಕವೆಂದು ನಂಬಿದ್ದರೂ ಕೂಡ ಪುಸ್ತಕ ಓದದ, ಶಾಲೆಗೆ ಹೋಗದ ನುರಿತ